**Crl Misc 640/2021**

ಪಿ.ಡಬ್ಲೂ -1

**<u>ದಿಃ 09-01-2023 ರಂದು ಸಾಕ್ಷಿಗೆಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀಸವಾಲು ಎದುರುದಾರರ ಪರ ಶ್ರೀ ವಿ ವಿ ವಕೀಲರಿಂದಃ</u>**

ನಾನು 2 ನೇ ಬಿ.ಎ ವರೆಗೆ ಓದಿರುತ್ತೇನೆ. ನಾನು ಯಾವುದೇ ಕೆಲಸ ಮಾಡುತ್ತಿಲ್ಲ, ನಿಮ್ಮ ತಂದೆಗೆ 4 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಮೂರು ಜನ ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ ಎಂದರೆ ಸರಿ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ನಾವು ಎಸ್.ಸಿ ಜನಾಂಗಕ್ಕೆ ಸೇರುತ್ತೇವೆ.

4 ಮತ್ತು 5 ನೇ ಎದುರುದಾರರು ಕೆ.ಅರ್.ನಗರದಲ್ಲಿ ವಾಸ ಎಂದರೆ ಸರಿ. 4 ಮತ್ತು 5 ನೇ ಎದುರುದಾರರು ಅಪರೂಪಕ್ಕೆ ತಂದೆ ಮನೆಗೆ ಬಂದು 1-2 ದಿನ ಇದ್ದು, ವಾಪಸ್ಸು ಗಂಡನ ಮನೆಗೆ ಹೋಗುತ್ತಾರೆಂದರೆ ಸರಿ. ನಿಮ್ಮ ತಂದೆಗೆ ಸೇರಿದ 30 ಗುಂಟೆ ಜಮೀನು ಇದೆ ಎಂದರೆ ಸರಿ. 1 ನೇ ಎದುರುದಾರ ಹಾಗೂ ಅವರ ಕುಟುಂಬಕ್ಕೆ 2 ಎಕರೆ ಜಮೀನು ಇದೆ ಎಂದರೆ ಸಾಕ್ಷಿ ಇದೆ ಎಷ್ಟು ಇದೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಎದುರುದಾರರು ನಿಮಗಿಂತ ಉತ್ತಮ ಸ್ಥಿತಿಯಲ್ಲಿ ಜೀವನ ನಿರ್ವಹಣೆ ಮಾಡುತ್ತಾರೆಂದರೆ ಸರಿ.

ನಿಮ್ಮ ಹಾಗೂ 1 ನೇ ಎದುರುದಾರನ ಮನೆ ಎದುರು ಬದರಿಗೆ ಇದೆ ಎಂದರೆ ಸರಿ. ನಿಮ್ಮ ಹಾಗೂ 1 ನೇ ಎದುರುದಾರನ ಮನೆಯವರ ಮಧ್ಯೆ ಕೊಳಿ ವಿಚಾರವಾಗಿ 7-8 ವರ್ಷಗಳ ಹಿಂದೆ ಜಗಳವಾಗಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅಂದಿನಿಂದ ಎದುರುದಾರರಿಗೂ ನಿಮ್ಮ ಮನೆಯವರಿಗೂ ಮಾತುಕತೆ ಇರಲಿಲ್ಲ ಎಂದರೆ ಸಾಕ್ಷಿ ಎದುರುಗಡೆ ಮನೆಯವರಾಗಿದ್ದರಿಂದ ಚೆನ್ನಾಗಿ ಇದ್ದೇವು ಎಂದು ಹೇಳುತ್ತಾರೆ. ನಿಮಗೂ ಹಾಗೂ ಎದುರುದಾರರಿಗೂ ಮಾತುಕತೆ ಇರದೇ ಇದ್ದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಹುಡುಗಿ ಮನೆಗೆ ಹುಡುಗನ ಮನೆಯವರು ಸಾಂಪ್ರದಾಯಿಕವಾಗಿ ನೋಡಲು ಬರುತ್ತಾರೆ. ಯಾರ್ಯಾರು, ಯಾವ ತಾರೀಖಿನಂದು ಬಂದಿದ್ದರು ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ, ಎದುರುದಾರರೆಲ್ಲರೂ ಬಂದಿದ್ದರು ಎಂದು ಹೇಳುತ್ತಾರೆ. ಎದುರುದಾರರಲ್ಲದೇ ಮತ್ಯಾರು ಬಂದಿದ್ದರು ಎಂದರೆ ಸಾಕ್ಷಿ ಮದುವೆ ಬ್ರೋಕರ್ ಬಂದಿದ್ದು, ಅವರ ಹೆಸರು ನೆನಪಿಲ್ಲ ಎಂದು ಹೇಳುತ್ತಾರೆ. ಮದುವೆ ಬ್ರೋಕರ್ ಎಂದರೆ ಒಬ್ಬ ವ್ಯಕ್ತಿ. ಸದರಿ ಮದುವೆ ಬ್ರೋಕರ್ ನಿಮ್ಮ ತಂದೆ-ತಾಯಿಗೆ ಗೊತ್ತಾ ಎಂದರೆ ಸಾಕ್ಷಿ ತಂದೆ-ತಾಯಿಗೆ ಗೊತ್ತೊ-ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಮದುವೆ ಬ್ರೋಕರ್ ನೀವು ಹಾಗೂ ನಿಮ್ಮ ತಂದೆ-ತಾಯಿ ನೋಡಿದ್ದೀರಿ ಎಂದರೆ ಸಾಕ್ಷಿ ಹೌದು ನೋಡಿದ್ದೇವೆಂದು ಹೇಳುತ್ತಾರೆ. ಸದರಿ ಮದುವೆ ಬ್ರೋಕರ್ ಮದುವೆ ಮುಗಿಯುವವರೆಗೂ ಇದ್ದರಾ ಎಂದರೆ ಸಾಕ್ಷಿ ನಿಶ್ಚಿತಾರ್ಥ ಆಗುವ ಸಮಯದಲ್ಲಿ ಮನಸ್ತಾಪ ಉಂಟಾಗಿದೆ, ಮದುವೆಯಾಗಿಲ್ಲ ಎಂದು ಹೇಳುತ್ತಾರೆ.

ನಿಪಿ-5 ರಿಂದ 7 ಭಾವಚಿತ್ರಗಳನ್ನು ಕೆ.ಆರ್.ಎಸ್. ಡ್ಯಾಮ್ ಲ್ಲಿ ಮೊಬೈಲಿನಿಂದ ತೆಗೆಯಲಾಗಿದೆ. ಸದರಿ ಭಾವಚಿತ್ರಗಳನ್ನು ಹುಣಸೂರಿನ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿದ್ದು. ಸ್ಟುಡಿಯೋ ಹೆಸರು ನೆನಪಿಲ್ಲ. ಸದರಿ ಸ್ಟುಡಿಯೋ ಹುಣಸೂರಿನ ಗೋಕುಲ ರಸ್ತೆಯಲ್ಲಿದೆ. ಭಾವಚಿತ್ರಗಳನ್ನು ಪ್ರಿಂಟ್ ಹಾಕಲು 60 ರೂ. ಹಣ ಪಡೆದಿರುತ್ತಾರೆ. ಹಣ ಪಡೆದ ಬಗ್ಗೆ ರಶೀದಿಯನ್ನು ಕೊಟ್ಟಿರುವುದಿಲ್ಲ. ಸಾಮಾನ್ಯವಾಗಿ ಭಾವಚಿತ್ರಗಳನ್ನು ಪ್ರಿಂಟ್ ಹಾಕಿಸಲು ಹೋದಾಗ ರಶೀದಿ ಕೊಡುತ್ತಾರೆಂದರೆ ಸಾಕ್ಷಿ ಕೊಡುತ್ತಾರೆ, ಆದರೆ ನಾವು ಅಲ್ಲೇ ಹಾಕಿಸಿದ್ದರಿಂದ ಕೊಡಲಿಲ್ಲ ಎಂದು ಹೇಳುತ್ತಾರೆ. ನಿಪಿ-8 ನ್ನು ಭಾವಚಿತ್ರಗಳನ್ನು ಪ್ರಿಂಟ್ ಹಾಕಿಸಿದ ಸ್ಟುಡಿಯೋದಲ್ಲೇ ಮಾಡಿಸಲಾಯಿತು. ನಿಪಿ-8 ನ್ನು ಪ್ರಿಂಟ್ ಹಾಕಿಸಲು 100 ರೂ.ಗಳನ್ನು ಪಡೆದಿರುತ್ತಾರೆ. ನಿಪಿ-8 ಪ್ರಿಂಟ್ ಹಾಕಲು ಹಣ ಪಡೆದ ಬಗ್ಗೆ ರಶೀದಿಯನ್ನು ಕೊಟ್ಟಿರುವುದಿಲ್ಲ. ನಿಪಿ-5 ರಿಂದ 8 ನ್ನು ಪ್ರಿಂಟ್ ಹಾಕಿದ ಸ್ಟುಡಿಯೋದವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಇತ್ತೀಚೆಗೆ ಇಲೆಕ್ಟ್ರಾನಿಕ್ ಮಿಡಿಯಾ ಮಾಧ್ಯಮ ಹಾಗೂ ಇಲೆಕ್ಟ್ರಾನಿಕ್ ಯುಗದಲ್ಲಿ ಯಾವ ವ್ಯಕ್ತಿಯ ಪೊಟೋವನ್ನು ಯಾವ ವ್ಯಕ್ತಿಗೆ ಬೇಕಾದರೂ ಮ್ಯಾಚ್ ಮಾಡಿ ಪ್ರಿಂಟ್ ತೆಗೆಯಬಹುದು ಎಂದರೆ ಸರಿ. ನಿಪಿ-4 ನ್ನು 100 ರೂ. ಹಣ ಪಾವತಿಸಿದರೇ ಸ್ಟುಡಿಯೋ ದಲ್ಲಿ ಪ್ರಿಂಟ್ ಹಾಕಿ ಕೊಡುತ್ತಾರೆಂದರೆ ಸರಿಯಲ್ಲ. ನಿಪಿ-4 ರಿಂದ 8 ನ್ನು ಅರ್ಜಿಗೊಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಹುಡುಗನ ಮನೆಯವರು ನಿಮ್ಮನ್ನು ನೋಡಿಕೊಂಡು ಹೋದ ಮೇಲೆ ನಿಮ್ಮ ಮನೆಯವರು ಹುಡುಗನ ಮನೆಗೆ ಯಾವಾಗ ಹೋದರು ಎಂದರೆ ಸಾಕ್ಷಿ ನಮ್ಮ ಮನೆಯವರು ಇನ್ನು ಹೋಗಿರಲಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ-ತಾಯಿ ಹುಡುಗನ ಮನೆಗೆ ಇಲ್ಲಿಯವರೆಗೆ ಹೋಗಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು).

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು